ಜಿಲ್ಲೆಯ ಹೆಸರು			ಜಿಲ್ಲೆಯ ಹೆಸರು		
೧	ಬೆಂಗಳೂರು ಜಿಲ್ಲೆ	೧	೧	ಬೆಂಗಳೂರು ಜಿಲ್ಲೆ	೨೫೪
ಅ	ಬೆಂಗಳೂರು (ನಗರ)	೨	ಅ	ಬೆಂಗಳೂರು ನಗರ	೧೦,೫೮೨
೨	ತುಮಕೂರು	೧	೨	ತುಮಕೂರು	೨೦೨
೩	ಕೋಲಾರ	—	೩	ಕೋಲಾರ	೭೧
೪	ಕೆ. ಜೆ. ಎಫ್	—	೪	ಕೆ. ಜಿ. ಎಫ್	೧೧೫
೫	ಮೈಸೂರು	೪	೫	ಮೈಸೂರು	೬೮೪
೬	ಮಂಡ್ಯ	೫	೬	ಮಂಡ್ಯ	೧೦೬
೭	ಹಾಸನ	—	೭	ಹಾಸನ	೧೩೩
೮	ಕೊಡಗು	೧	೮	ಕೊಡಗು	೯೭
೯	ಶಿವಮೊಗ್ಗ	೧	೯	ಶಿವಮೊಗ್ಗ	೫೧೪
೧೦	ಬಳ್ಳಾರಿ	೪	೧೦	ಬಳ್ಳಾರಿ	೨೫೯
೧೧	ಚಿತ್ರದುರ್ಗ	೩	೧೧	ಚಿತ್ರದುರ್ಗ	೨೭೬
೧೨	ದ. ಕ. ಮಂಗಳೂರು	೧	೧೨	ದಕ್ಷಿಣ ಕನ್ನಡ (ಮಂಗಳೂರು)	೧೭೬
೧೩	ಚಿಕ್ಕಮಗಳೂರು	—	೧೩	ಚಿಕ್ಕಮಗಳೂರು	೮೮
೧೪	ಉ. ಕ. ಕಾರವಾರ	—	೧೪	ಉತ್ತರ ಕನ್ನಡ (ಕಾರವಾರ)	೧೦೬
೧೫	ಬೆಳಗಾಂ	೨	೧೫	ಬೆಳಗಾಂ	೨೪೫
೧೬	ಬಿಜಾಪುರ	೨	೧೬	ಬಿಜಾಪುರ	೨೫೫
೧೭	ಧಾರವಾಡ	೨	೧೭	ಧಾರವಾಡ	೨೬೭
೧೮	ಗುಲ್ಬರ್ಗ	೩	೧೮	ಗುಲ್ಬರ್ಗಾ	೧೯೬
೧೯	ಬೀದರ್	—	೧೯	ಬೀದರ್	೧೨೩
೨೦	ರಾಯಚೂರು	೪	೨೦	ರಾಯಚೂರು	೨೩೮
೨೧	ರೈಲ್ವೆ	—	೨೧	ರೈಲ್ವೆ	೧೮
	ಒಟ್ಟು	೩೬		ಒಟ್ಟು	೧೫೦೧೫

ಪೋಲೀಸರ ಕಿರುಕುಳದ ಬಗ್ಗೆ

೧೯೦೨ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಬಹು ಸಂಖ್ಯೆ ಜನವಾಂಗದ ದೇವಸ್ಥಾನಗಳ ವಿಗ್ರಹಗಳನ್ನು ಒಡೆದು ಹಾಕಿರುವ ಘಟನೆಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ದೇವಸ್ಥಾನಗಳ ಹೆಸರು ಮತ್ತು ಜಿಲ್ಲಾವಾರು ವಿವರ ನೀಡುವುದು)

ಅ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಬಹು ಸಂಖ್ಯಾತರು ನಡೆಸುವ ಹಬ್ಬದ ದಿನಗಳಲ್ಲಿ ಮೆರವಣಿಗೆಯಲ್ಲಿ ಹೋಗುವಾಗ ಅಲ್ಪ ಸಂಖ್ಯಾತರ ದೇವಸ್ಥಾನಗಳ ಮುಂದೆ ಡೋಲು, ಕಂಜಿತ ಭಜನೆ, ಓಲಗ ಇತ್ಯಾದಿ ಬಾರಿಸಬಾರದೆಂದು ಪೋಲೀಸ್ ಅಧಿಕಾರಿಗಳು ಕೆಲವು ಕಡೆ ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕಾರಣವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಕೆಲವೊಂದು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಆದರೆ ೧೯೮೬–೮೭ರಲ್ಲಿ ಯಾವ ಘಟನೆಯೂ ನಡೆದಿರುವುದಿಲ್ಲ.

ಇ) ೧೯೮೭–೮೮ರಲ್ಲಿ ನಡೆದಿರುವ ಘಟನೆಗಳ ವಿವರಗಳು ಕೆಳಕಂಡಂತಿವೆ.

ಜಿಲ್ಲೆ	ದಿನಾಂಕ	ದೇವಸ್ಥಾನದ ವಿವರಗಳು
ಕೋಲಾರ	೭–೮–೮೭	ಈಶ್ವರ ದೇವಸ್ಥಾನ ಅಂತರಗಂಗೆಬೆಟ್ಟ
ಕೋಲಾರ	೧೭–೧೨–೮೭	ಮಾರ್ತಾಂಡೇಶ್ವರ ದೇವಸ್ಥಾನ, ಒಕ್ಕಲೇರಿ
ಕೋಲಾರ	೨೧–೧೨–೮೭	ಆಂಜನೇಯಸ್ವಾಮಿ ದೇವಸ್ಥಾನ, ಮುಂಳಬಾಗಿಲು
ಕೋಲಾರ	೨೧–೧೨–೮೭	ನರಸಿಂಹಸ್ವಾಮಿ ದೇವಸ್ಥಾನ, ನಂದಿ. ಚಿಕ್ಕಬಳ್ಳಾಪುರ.
ತುಮಕೂರು	೪–೧೧–೮೭	ರೇವಣ್ಣಸಿದ್ದೇಶ್ವರ ದೇವಸ್ಥಾನ, ಹೊನ್ನವಳ್ಳಿ. ತಿಪಟೂರು ತಾಲ್ಲೂಕು
ಚಿತ್ರದುರ್ಗ	೨೯–೧೨–೮೭	ಗಣೇಶ ದೇವಸ್ಥಾನ ಚಿತ್ರದುರ್ಗ ಹೊಸದುರ್ಗ
ಬಿಜಾಪುರ	೧೦–೧೨–೮೭	ಬಿಜಾಪುರವಾಸಿ ಆರ್. ಎನ್ ನವಡಗಿ ಜಮೀನಿನಲ್ಲಿದ್ದ ನಂದಿ ವಿಗ್ರಹ
ಕೆ.ಜಿ. ಎಫ್	೧೯–೧೨–೮೭	ಬಸವೇಶ್ವರ ದೇವಸ್ಥಾನ, ಹಂಚಲಗಾವು, ಬಂಗಾರಪೇಟೆ
ಶಿವಮೊಗ್ಗ	೧೭–೯–೮೭	ರಾಮೇಶ್ವರ ದೇವಸ್ಥಾನ ತೀರ್ಥಹಳ್ಳಿ

ಆ) ಈ ವಿಚಾರವಾಗಿ ಕೇಸಂಗಳನ್ನು ನೊಂದಾಯಿಸಿಕೊಂಡು ತಪಾಸಣೆಯನ್ನು ಕೈಗೊಂಡು ಹಲವಾರು ಕಡೆ ಅಪರಾಧಿಗಳನ್ನು ಬಂಧಿಸಿ ಮೊಕದ್ದಮೆಗಳನ್ನು ಹೂಡಿರುವುದಲ್ಲದೆ ದೇವಸ್ಥಾನಗಳ ಹತ್ತಿರ ಗಸ್ತನ್ನು ಹೆಚ್ಚಿಸಿ ದುಷ್ಕರ್ಮಿಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ.

ಇ) ಇಲ್ಲ.